ನಲ್ಲಿ ಓಡಾಡುತ್ತಾರೆ ಅವರಿಗೆ ವೆಹಿಕಲ್ಸ್‌ಅನ್ನು ಕೊಡಬೇಕು. ಜೋರುನೂರು ಹಳ್ಳಿಯಲ್ಲಿ ಒಂದು ಪೋಲೀಸ್ ಠಾಣೆಯನ್ನು ಮಾಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಇದರ ಬಗ್ಗೆ ಯಾವ ರೀತಿಯ ಸೂಚನೆ ಮಾಡ್ತಾರೋ ಅದೇ ರೀತಿ ಮಾಡುತ್ತೇನೆ.

ಕರ್ನಾಟಕ ಲೋಕಸೇವಾ ಆಯೋಗದ ಸಿಬ್ಬಂದಿಯವರಿಂದ ಕೆಲಸ ತೆಗೆಯುವುದು

೨೮೨ ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ೩ ವರ್ಷಗಳವರೆಗೆ ಯಾವುದೇ ನೇಮಕಾತಿಯನ್ನು ಮಾಡುವುದಿಲ್ಲವೆಂದು ಹೇಳಿಕೆ ನೀಡಿ ಹೊಸ ಸದಸ್ಯರನ್ನು ಕರ್ನಾಟಕ ಲೋಕಸೇವಾ ಆಯೋಗಕ್ಕೆ ನೇಮಕ ಮಾಡಿರುವುದರ ಔಚಿತ್ಯವೇನು?

ಆ) ಹಾಲಿ ಕೆಲಸವೇ ಇಲ್ಲದೇ ಇರುವ ಸದಸ್ಯ ಅಧ್ಯಕ್ಷ ನೌಕರರಿಗೆ ಯಾವ ಹೊಸ ಕೆಲಸ ಕೊಟ್ಟು, ಅವರಿಗೆ ಕೊಡತಕ್ಕ ಸಂಬಳಕ್ಕೆ ತಕ್ಕ ಕೆಲಸವನ್ನು ಮಾಡಿಸುವುದು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು)—

ಅ) ದಿನಾಂಕ ೧೦-೧೧-೧೯೮೭ರಂದು ಉಲ್ಲೇಖಿತ ವಿತವ್ಯಯ ಆದೇಶವನ್ನು ಹೊರಡಿಸಿದ ನಂತರ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಯಾವುದೇ ಹೊಸ ಸದಸ್ಯರನ್ನು ನೇಮಿಸಿರುವುದಿಲ್ಲ.

ಆ) ಲೋಕಸೇವಾ ಆಯೋಗಕ್ಕೆ ಹಾಲಿ ಕಲಸವೇ ಇಲ್ಲ ಎಂಬ ಸೂಚನೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

ಶ್ರೀ ಬಿ. ಲಕ್ಕಪ್ಪ.—ಮೂರು ವರ್ಷಗಳ ಕಾಲ ಸರ್ಕಾರದ ಯಾವುದೇ ಹುದ್ದೆಗಳಿಗೆ ನೇಮಕಾತಿ ಇಲ್ಲ ವೆಂದು ಸರ್ಕಾರದ ಪ್ರಕಟಣೆ ಹೊರಡಿಸಿದ ಮೇಲೆ ರಾಜ್ಯದಾದ್ಯಂತ ಚಳುವಳಿ ನಡೆದಿದೆಯೇ ? ಆ ರೀತಿಯ ಚಳುವಳಿಯನ್ನು ನಿರುದ್ಯೋಗಿ ಯುವಕರು ಮಾಡಿಲ್ಲವೇ ? ೧೦-೭-೧೯೮೭ರಿಂದ ನೇಮಕಾತಿ ಯನ್ನು ಮೂರು ವರ್ಷ ತಡೆಹಿಡಿದಿದ್ದೀವಿ ಎಂಬುದು ಇದರ ಅಭಿಪ್ರಾಯವಾಗುವುದಿಲ್ಲವೇ ? ಇದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಸರ್ವತಾ ಅಭಿಪ್ರಾಯ ಅಲ್ಲ. ನಮ್ಮ ಉತ್ತರವನ್ನು ದಯವಾಡಿ ಮಾನ್ಯ ಸದಸ್ಯರು ಇನ್ನೊಂದು ಸಲ ಗಮನಕೊಟ್ಟು ಓದಬೇಕು. ನಾನು ಏನು ಹೇಳಿದ್ದೇನೆಂದರೆ, " ಲೋಕ ಸೇವಾ ಆಯೋಗಕ್ಕೆ ಯಾವುದೇ ಹೊಸ ಸದಸ್ಯರನ್ನು ನೇಮಿಸಿರುವುದಿಲ್ಲ " ಅಂತ ಹೇಳಿದ್ದೇನೆ. ಸರ್ಕಾರಿ ನೌಕರಿಗೆ ಯಾರನ್ನೂ ಸೇರಿಸಿಲ್ಲ ಎಂದು ಹೇಳಿಲ್ಲ. ಒಂದು ಮಾತ್ರ ನಿಜ. ಕೆಲವು ತಿಂಗಳ ಹಿಂದೆ ಕೇಂದ್ರ ಸರ್ಕಾರದಿಂದ ವಿತ್ತವ್ಯಯದ ಬಗ್ಗೆ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸೂಚನೆ ಬಂತು. ಅದೇ ರೀತಿಯ ಸೂಚನೆ ಎಲ್ಲಾ ಸರ್ಕಾರಗಳಿಗೂ ಹೋಗಿದೆ. ಆ ಸೂಚನೆಯನ್ನು ಗಮನದಲ್ಲಿಟ್ಟುಕೊಂಡು ನಾವು ವಿತವ್ಯಯಕ್ಕೆ ಸಂಬಂಧಪಟ್ಟ ಹಾಗೆ ಒಂದು ಆರ್ಡರ್‌ನ್ನು ಹೊರಡಿಸಿದೆವು. ಆದರೆ ಇದರಿಂದ ಮುಖ್ಯವಾಗಿ ನಮ್ಮ ಸುಶಿಕ್ಷಿತ ನಿರುದ್ಯೋಗಿ ಯುವಕರಿಗೆ ಒಂದು ಭಯ ಆಯಿತು. ಇನ್ನು ೩ ವರ್ಷ ನಮಗೆ ಸರ್ಕಾರಿ ನೌಕರಿಯೇ ಸಿಗುವುದಿಲ್ಲ ಎಂದು. ಅದಕ್ಕಾಗಿ ಕೆಲವು ಕಡೆವಿ ರುದ್ಧ ಚಳುವಳಿ ಮಾಡಿದರು. ಆಗ ಈ ವಿಚಾರ ಸದನದ ಮುಂದೆ ಬಂತು. ಸಾಕಷ್ಟು ಚರ್ಚೆ ಕೂಡ ಆಯಿತು. ಅವರ ಮನಸ್ಸಿಗೆ ಯಾವುದೇ ರೀತಿಯ ಭಯ ಆಗ ಬಾರದು ಅಥವಾ ಸಂದೇಹ ಬರಬಾರದು ಎಂದು ಮೊದಲು ಸರ್ಕಾರ ಹೊರಡಿಸಿದ ಆರ್ಡರ್‌ಗೆ ತಿದ್ದುಪಡಿಯನ್ನು ಮಾಡಿದ್ದೇವೆ. ಇದರಿಂದ ಹಿಂದೆ ಯಾವ ರೀತಿ ಇತ್ತು ಅದೇ ರೀತಿ ಇವತ್ತು ಕೂಡ ಇರುತ್ತದೆ. ರೆಕ್ರೂಟ್‌ಮೆಂಟನ್ನು ನಾವು ತಡೆಹಿಡಿಯುವುದಕ್ಕೆ ಹೋಗಿಲ್ಲ. ರೆಕ್ರೂಟ್‌ಮೆಂಟ್ ಬೇರೆ ಬೇರೆ ಹಂತದಲ್ಲಿ ನಡೆಯುತ್ತದೆ. ಜಿಲ್ಲಾಪಂಚಾಯತ್ ಮಟ್ಟದಲ್ಲಿ, ಡಿವಿಜನ್ ಮಟ್ಟದಲ್ಲಿ ಇವತ್ತು ನೇಮಕಾತಿ ನಡೆಯುತ್ತದೆ. ಎಲ್ಲವನ್ನೂ ಲೋಕ ಸೇವಾ ಆಯೋಗವೇ ಮಾಡುವುದಿಲ್ಲ. ಅದು ಯಾವುದನ್ನು ಮಾಡಬೇಕೋ ಅದನ್ನು ಮಾಡುತ್ತದೆ.

ಶ್ರೀ ಕೆ. ಲಕ್ಕಪ್ಪ.—ವಿವಿಧ ಇಲಾಖೆಗಳಲ್ಲಿನ ಬೀಡಿಕೆಯನ್ನು ಅನುಸರಿಸಿ ನೇಮಕ ಮಾಡತಕ್ಕ ಕೆಲಸ ಲೋಕಸೇವಾ ಆಯೋಗದ್ದು ಇದೆ. ಈ ಮೂರು ವರ್ಷಗಳ ಕಾಲ ನೇಮಕಾತಿ ಇಲ್ಲ ಎಂದೆ ಆದರೆ ಪ್ರಕಾರ ಹೋದರೆ, ನೇಮಕಾತಿ ಇಲ್ಲದ ಮೇಲೆ ಅಲ್ಲಿರತಕ್ಕ ಅಧ್ಯಕ್ಷರು ಸದಸ್ಯರು ಹಾಗೂ ಅಧಿಕಾರ ವರ್ಗಕ್ಕೆ ಏನು ಕೆಲಸ ಇದೆ ? ಲೋಕಸೇವಾ ಆಯೋಗಕ್ಕೆ ಇನ್ನೂ ಎಷ್ಟು ಸದಸ್ಯರನ್ನು ನೇಮಕ ಮಾಡಬೇಕಾಗಿದೆ.

ಶ್ರೀ ರಾಮಕೃಷ್ಣ ಹೆಗ್ಡೆ:—ಲೋಕಸೇವಾ ಆಯೋಗದಲ್ಲಿ ಯಾವ ಸದಸ್ಯರ ಸ್ಥಾನವೂ ತೆರವು ಇಲ್ಲ. ಅಲ್ಲಿಯ ಅಧ್ಯಕ್ಷರು ಕಾಯಿಲೆಯಲ್ಲಿದ್ದಾರೆ. ಅವರಿಗೆ ಶುಶ್ರೂಷೆ ನಡೆಯುತ್ತಿದೆ. ಪುನ: ಪುನ: ಮಾನ್ಯ ಲಕ್ಕಪ್ಪನವರು ಅದೇ ಹಾಡನ್ನು ಹಾಡುತ್ತಿದ್ದಾರೆ. ಮೂರು ವರ್ಷ ನೇಮಕಾತಿಯನ್ನೇ ಮಾಡುವುದಿಲ್ಲ ಎಂದಂ ಅಲ್ಲ, ಮಾಡುವುದಿಲ್ಲ ಎಂದು ಹೇಳಿಲ್ಲ. ದಯವಿಟ್ಟು ಆ ಒಂದು ವಿಚಾರ ಪೆನ್ನು ಮೆಶ್ಕೆ ಹರಡಬೇಡಿ ಹಿಂದೆ ಮಾಡಿದ ಸರ್ಕಾರಿ ಆಜ್ಞೆಯನ್ನು ತಿದ್ದುಪಡಿ ಮಾಡಿದ್ದೇವೆ. ಇವತ್ತು ಸರ್ಕಾರಿ ನೌಕರಿ ಒಂದೇ ಉದ್ಯೋಗ ಅಲ್ಲ. ಇದನ್ನು ನಾನು ಅನೇಕ ಸಲ ಹೇಳಿದ್ದೇನೆ. ಸುಶಿಕ್ಷಿತ. ಯಾವಕರು ಬೇರೆ ಬೇರೆ ರೀತಿಯ ಉದ್ಯೋಗಗಳನ್ನು ಮಾಡಬಹುದು, ಇರುವ ಉದ್ಯೋಗಾರ್ಥಿಗಳ ಪೈಕಿ ನೂರಕ್ಕೆ ಒಂದು ಅಥವಾ ಒಂದಾವರೆಯಷ್ಟು. ವ್ಯಕ್ತಿಗಳಿಗೆ ಸರ್ಕಾರಿ ನೌಕರಿ ಸಿಗುತ್ತದೆ.

ಗಂಬ್ಟಿ ನಗರದಲ್ಲಿ ಆಸ್ಪತ್ರೆಗಾಗಿ ಶಂಕು ಸ್ಥಾಪನೆ

೧೭೧೭. ಶ್ರೀ ಜಿ. ಎಸ್. ಶಿವಸಂಜಪ್ಪ (ಗಂಬ್ಟಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರು ಜಿಲ್ಲೆ ಗುಬ್ಬಿ ನಗರದಲ್ಲಿ ೩೦ ಹಾಸಿಗೆಗಳ ಆಸ್ಪತ್ರೆ ಕಟ್ಟಡಕ್ಕಾಗಿ ಶಂಕು ಸ್ಥಾಪನೆ ಯಾವಾಗ ಮಾಡಲಾಯಿತು ?

(ತಾರೀಖು ವಿವರ ನೀಡುವುದು)

ಆ) ಧಾನಿಗಳು ಒಂದು ಲಕ್ಷ ರೂ ಗಳನ್ನು ಸದರಿ ಕಟ್ಟಡಕ್ಕಾಗಿ ವಂತಿಗೆಯಾಗಿ ಕೊಟ್ಟಿರುವುದರಿ ಸರ್ಕಾರದ ಗಮನಕ್ಕೆ ಬಂದಿದೆಯೇ ? ಈ ಹಣ ಉಪಯೋಗಿಸಿ ಕಟ್ಟಡ ಕಟ್ಟಬೇಕೆಂದು ಸಾರ್ವಜನಿಕರು ಹಾಗೂ ಪುರ ಪ್ರಮುಖರು ಸರ್ಕಾರವನ್ನು ಪ್ರಾರ್ಥಿಸುತ್ತಾ ಬಂದಿದ್ದರೂ ಕಟ್ಟಡವನ್ನು ಕಟ್ಟದೇ ಇರಲು ಸರ್ಕಾರದವರಂ ಕೈಗೊಂಡ ಕ್ರಮಗಳೇನು ?

ಇ) ಹಾಗಿಲ್ಲದಿದ್ದಲ್ಲಿ ಕಟ್ಟಡ ಕಟ್ಟಿಸುವುದಕ್ಕೆ ಯಾವಾಗ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿ ಕುಟುಂಬ ಕಲ್ಯಾಣ ಸಚಿವರು).—

ಅ) ದಿನಾಂಕ ೧೪-೧೧-೧೯೮೪.

ಆ) ೩೦ ಹಾಸಿಗೆಗಳ ಆಸ್ಪತ್ರೆ ಕಟ್ಟಡದ ಒಂದು ಭಾಗವಾದ ೧೦ ಹಾಸಿಗೆಗಳ ಒಂದಂ ವಾರ್ಡನ್ನು ಕಟ್ಟಲು ಗುಬ್ಬಿ ಲಯನ್ಸ್ ಕ್ಲಬ್‌ನವರು ರೂ. ೧.೨೫ ಲಕ್ಷಗಳನ್ನು ದಾನವಾಗಿ ಕೊಡಲು ಒಪ್ಪಿರುತ್ತಾರೆ.

ಇ) ಜಿಲ್ಲಾ ಪರಿಷತ್‌ನವರು ಈ ಕಾಮಗಾರಿಗೆ ಹಣವನ್ನು ಬಿಡುಗಡೆ ಮಾಡಿದ ನಂತರ ಕಟ್ಟಡ ಕಟ್ಟಲು ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು.

ಶ್ರೀ ಜಿ. ಎಸ್. ಶಿವಸಂಜಪ್ಪ.—ಅಧ್ಯಕ್ಷರೇ, ೧೪-೧೧-೧೯೮೪ರಂದು ಶಂಕುಸ್ಥಾಪನೆ ಮಾಡಲಾಯಿತು ಎಂದು ಉತ್ತರ ಕೊಟ್ಟಿದ್ದಾರೆ. ಈ ಶಂಕುಸ್ಥಾಪನೆ ಮಾಡುವುದಕ್ಕಿಂತಲೂ ಮೊದಲು ಈ ವಿಚಾರದಲ್ಲಿ ನಕ್ಷೆಯಾಗಲೀ, ಎಸ್ಟಿಮೇಟ್ ಆಗಲೀ, ಮಂಜೂರಾತಿಯಾಗಲೀ, ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷೆನ್ ಆಗಲೀ ಆಗಿತ್ತೇ ಎಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಆಗಿರಲಿಲ್ಲ.